

ಹಣದ ಪಾತ್ರ ಬದಲಾಗುತ್ತಲೇ ಇದೆ. ಶತಮಾನಗಳ ಹಿಂದೆ ಸಂತೆಯಲ್ಲಿ ಕುಳಿತು ಜನರು ಪರಸ್ಪರ ತಮ್ಮಲ್ಲಿ ಇರುವ ವಸ್ತುಗಳನ್ನೇ ಹಣದ ಮೌಲ್ಯವಾಗಿ ಬದಲಾಯಿಸಿಕೊಳ್ಳುತ್ತಿದ್ದರು. ಆ ಬಳಿಕ ಲೋಹದ ನಾಣ್ಯಗಳು ಬಂದವು. ಅಲ್ಲಿಂದೀಚೆಗೆ ಕಾಗದದ ನೋಟುಗಳು! ಆ ಬಳಿಕ ಪ್ಲಾಸ್ಟಿಕ್ ಕಾರ್ಡ್‌ಗಳು! ಇನ್ನೀಗ ಡಿಜಿಟಲ್ ಹಣ! ಡಿಜಿಟಲ್ ಹಣವೆಂದರೆ ಕಣ್ಣಿಗೆ ಕಾಣಿಸದ, ಕೇವಲ ಅಂಕಿಗಳಲ್ಲಿ ಮಾತ್ರ ದಾಖಲಾಗುವ ಹಣ. ಕಾಲ ಸರಿದಂತೆ ಹಣ ಹೊಸ ಹೊಸ ರೂಪಧಾರಣೆ ಮಾಡುತ್ತಲೇ ಇದೆ.

ಐದುನೂರು ಮತ್ತು ಸಾವಿರ ರೂಪಾಯಿ ಮುಖಬೆಲೆಯ ನೋಟುಗಳನ್ನು ಕೇಂದ್ರ ಸರ್ಕಾರ ನವೆಂಬರ್ 8ರಂದು ಅಮಾನ್ಯ ಮಾಡಿದ ಬಳಿಕ ಇದೀಗ 'ಡಿಜಿಟಲ್ ಆರ್ಥಿಕತೆ'ಯ ಕೂಗು ಬಲವಾಗಿ ಮೇಲೆದ್ದಿದೆ. ಚಲಾವಣೆಯಲ್ಲಿದ್ದ ಶೇಕಡಾ 86ರಷ್ಟು ಮೌಲ್ಯದ ನೋಟುಗಳನ್ನು ರದ್ದು ಮಾಡಿದ ಬಳಿಕ ಹೊಸ ನೋಟುಗಳಿಗಾಗಿ ದೇಶದಲ್ಲಿ ಹಾಹಾಕಾರ ಎದ್ದದ್ದು ಸಹಜವೇ. ಅಷ್ಟೊಂದು ಅಪಾರ ಮೌಲ್ಯದ ನೋಟುಗಳನ್ನು ಮುದ್ರಿಸಲು ಸಾಕಷ್ಟು ಕಾಲಾವಕಾಶ ಬೇಕು. ಒಮ್ಮಿಂದೊಮ್ಮೆಲೆ ನೋಟುಗಳನ್ನು ತಂದು ಸುರಿಯಲು ಸರಕಾರಕ್ಕಾದರೂ ಹೇಗೆ ಸಾಧ್ಯ? ಹಾಗೆಂದು ಜನರು ವಹಿವಾಟುಗಳನ್ನು ನಿಲ್ಲಿಸಲು ಆದೀತೆ? ಈ ಹಂತದಲ್ಲೇ ಸುದ್ದಿಯಾದದ್ದು ಡಿಜಿಟಲ್ ಆರ್ಥಿಕತೆಯ ಐಡಿಯಾ. ನೋಟುಗಳ ಬದಲು ಲೆಕ್ಕಖಾತೆಗಳಲ್ಲೇ ಹಣದ ವರ್ಗಾವಣೆಯನ್ನು ತೋರಿಸಿದರೆ ಹೇಗೆ? ಹಾಗೆಂದೇ ಈಗ ನಗದುರಹಿತ ಆರ್ಥಿಕತೆಯ ಬಗ್ಗೆ ಬಲವಾದ ಪ್ರಚಾರ ನಡೆದಿದೆ. ಡಿಜಿಟಲ್ ಆರ್ಥಿಕತೆಯ ಮಾತು ಜೋರಾಗಿ ಕೇಳಿಬರುತ್ತಿದೆ.

ಕಾಗದದ ನೋಟುಗಳ ಬದಲಿಗೆ ಪ್ಲಾಸ್ಟಿಕ್ ಕಾರ್ಡ್‌ಗಳ ಬಳಕೆ ಮೊದಲು ಶುರುವಾದದ್ದು 1920ರ ದಶಕದಲ್ಲಿ. ಮೊದಲ ಪಾವತಿ ಕಾರ್ಡ್ ಬಂದದ್ದು ಅಮೆರಿಕದಲ್ಲಿ. 1950ರಲ್ಲಿ ಡೈನರ್ಸ್ ಕ್ಲಬ್ ಮತ್ತು ಅಮೆರಿಕನ್ ಎಕ್ಸ್‌ಪ್ರೆಸ್ ವಿಶ್ವದ ಮೊದಲ ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಪರಿಚಯಿಸಿದವು. ಜಗತ್ತಿನ ಮೊದಲ ಕ್ರೆಡಿಟ್ ಕಾರ್ಡ್‌ಅನ್ನು ಡೈನರ್ಸ್ ಕ್ಲಬ್ 1951ರಲ್ಲಿ ಪರಿಚಯಿಸಿತು. ಆದರೆ ಜಗತ್ತಿನೆಲ್ಲೆಡೆ ವ್ಯಾಪಕವಾಗಿ ಪ್ಲಾಸ್ಟಿಕ್ ಕಾರ್ಡ್‌ಗಳ ಬಳಕೆ ಆರಂಭವಾದದ್ದು 1970ರ ಬಳಿಕ– ಅದೂ ನಿರ್ದಿಷ್ಟ ಮಾನದಂಡದ ಮ್ಯಾಗ್ನೆಟಿಕ್ ಪಟ್ಟಿಗಳನ್ನು ಅಳವಡಿಸಿದ ಕಾರ್ಡ್‌ಗಳು ಬಂದ ಮೇಲೆ.

ಕಳೆದ ಶತಮಾನದ 90ರ ದಶಕದಲ್ಲಿ ಪ್ಲಾಸ್ಟಿಕ್ ಕಾರ್ಡ್‌ಗಳು ಜಗತ್ತಿನ ಎಲ್ಲೆಡೆ ಸಾಮಾನ್ಯ ಎನ್ನುವಂತಾಯಿತು. 2001ರ ವೇಳೆಗೆ ಜಗತ್ತಿನಾದ್ಯಂತ ಪ್ಲಾಸ್ಟಿಕ್ ಕಾರ್ಡ್‌ಗಳು ವಹಿವಾಟಿಗೆ ಅನಿವಾರ್ಯ ಎನ್ನುವ ತೀರ್ಮಾನಕ್ಕೆ ಜನರೇ ಬಂದರು.

ಭಾರತದಲ್ಲಿ 80ರ ದಶಕದಲ್ಲಿ ಸಿಟಿಬ್ಯಾಂಕ್ ಮತ್ತು ಎಚ್‌ಎಸ್‌ಬಿಸಿ ಬ್ಯಾಂಕ್‌ಗಳು ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಪರಿಚಯಿಸಿ ಪ್ಲಾಸ್ಟಿಕ್ ಹಣದ ಯುಗಕ್ಕೆ ಅಡಿಪಾಯ ಹಾಕಿದವು. ಮುಂದಿನ ಎರಡು ದಶಕಗಳಲ್ಲಿ ಹತ್ತಕ್ಕೂ ಹೆಚ್ಚು ಬ್ಯಾಂಕ್‌ಗಳು ಪ್ಲಾಸ್ಟಿಕ್ ಕಾರ್ಡ್‌ಗಳನ್ನು ಪರಿಚಯಿಸಿದವು. 2001ರ ವೇಳೆಗೆ ದೇಶದ ಕ್ರೆಡಿಟ್ ಕಾರ್ಡ್ ಮಾರುಕಟ್ಟೆಯಲ್ಲಿ ವಾರ್ಷಿಕ ಶೇಕಡಾ 25ರಷ್ಟು ವೃದ್ಧಿ ಕಾಣಿಸಿತು. ಈಗಂತೂ ಕ್ರೆಡಿಟ್ ಕಾರ್ಡ್ ಸರ್ವಾಂತರ್ಯಾಮಿ.

ಡೆಬಿಟ್ ಕಾರ್ಡ್‌ಗಳು ಭಾರತದಲ್ಲಿ ಜನಪ್ರಿಯವಾದದ್ದು 1995ರ ಬಳಿಕ. ಅದಕ್ಕೂ ಮುನ್ನ ಡೆಬಿಟ್ ಕಾರ್ಡ್‌ಗಳ ಶುಲ್ಕ ದುಬಾರಿ ಮತ್ತು ಎಲ್ಲೆಡೆ ಬಳಕೆಗೆ ಬರುವುದಿಲ್ಲ ಎನ್ನುವ ದೂರುಗಳಿದ್ದವು. ಡೆಬಿಟ್ ಕಾರ್ಡ್‌ಗಳ ಬಳಕೆ ಎಲ್ಲ ಮಾರುಕಟ್ಟೆಗಳಲ್ಲೂ ಶುರುವಾದ ಬಳಿಕ ಜನರ ನಂಬಿಕೆ ಹೆಚ್ಚಿತು. ಜೇಬಿನಲ್ಲಿ